# ಜಲಸಂಗ್ವಿಯ ಮದನಿಕಾ

■ ಚಿತ್ರ– ಬರಹ:
**ವೆಂಕಟೇಶ ಮುದಗಲ್**







ಶಿಲ್ಪಕಲೆಗೆ ಸೃಜನಶೀಲ ಮನಸ್ಸನ್ನು ಮುದಗೊಳಿಸಿ ಕಲ್ಪನೆಗಳನ್ನು ಚಿಗುರಿಸುವ ಸಾಮರ್ಥ್ಯವಿದೆ. ಬೀದರ ಜಿಲ್ಲೆಯ ಹುಮ್ನಾಬಾದದಿಂದ ಕೇವಲ 10 ಕಿ.ಮೀ ದೂರದಲ್ಲಿರುವ ಜಲಸಂಗ್ವಿಯಲ್ಲಿ ಇರುವ ಶಿಲ್ಪಗಳು ಇಂಥ ಅನುಭವ ಕಟ್ಟಿಕೊಡಬಲ್ಲವು.

ಕ್ರಿ.ಶ 1100ರಲ್ಲಿ ಕಲ್ಯಾಣದ 6ನೇಯ ವಿಕ್ರಮಾದಿತ್ಯ ಚಾಲುಕ್ಯ ದೊರೆ ಈ ದೇವಾಲಯ ನಿರ್ಮಿಸಿದ ಎಂದು ಹೇಳಲಾಗುತ್ತಿದೆ. ನಕ್ಷತ್ರಾಕಾರದ ರೀತಿಯಲ್ಲಿ ನಿರ್ಮಿಸಲಾದ ಈ ದೇವಾಲಯದ ಹೊರಭಾಗದಲ್ಲಿ ‘ಮದನಿಕಾ’ ಎಂದು ಕರೆಯಲಾಗುವ ಶಿಲಾಬಾಲಿಕೆಯರ ಶಿಲ್ಪಗಳನ್ನು ತ್ರಿಭಂಗ ಶೈಲಿಯಲ್ಲಿ ಆಕರ್ಷಕವಾಗಿ ಕೆತ್ತಲಾಗಿದೆ. ಅದರಲ್ಲೂ ವಿಶೇಷವಾಗಿ ಶಾಸನ ಬರೆಯುತ್ತಿರುವ ಯುವತಿಯ ಶಿಲ್ಪವೊಂದು ನಮ್ಮನ್ನು ಮಂತ್ರಮುಗ್ಧಗೊಳಿಸುತ್ತದೆ.

ಈ ದೇವಾಲಯದ ಕುಸುರಿ ಕೆತ್ತನೆಯ ಶಿಲ್ಪ ಸೌಂದರ್ಯವೇ ಮುಂದೆ ಬೇಲೂರು, ಹಳೆಬೀಡು ಮತ್ತು ಸೋಮನಾಥ ಪುರದ ದೇವಾಲಯಗಳ ನಿರ್ಮಾಣಕ್ಕೆ ಪ್ರೇರಣೆಯಾಯಿತು ಎಂದು ಕೆಲವು ಇತಿಹಾಸ ತಜ್ಞರು ವಿಶ್ಲೇಷಿಸುತ್ತಾರೆ.

**ತಲುಪುವ ಮಾರ್ಗ:** ಕಲಬುರ್ಗಿವರೆಗೆ ರೈಲಿನಲ್ಲಿ ಬಂದು ರಸ್ತೆ ಮೂಲಕ ಹುಮ್ನಾಬಾದ್ ತಲುಪಿ ಅಲ್ಲಿಂದ 10 ಕಿ.ಮೀ ದೂರದ ಜಲಸಂಗ್ವಿ ಗ್ರಾಮ ತಲುಪಬಹುದು. ಹತ್ತಿರದ ವಿಮಾನ ನಿಲ್ದಾಣ ಹೈದರಾಬಾದ್.